ಆ. ಉದ್ಭವಿಸುವುದಿಲ್ಲ.

ಇ. ಶಿಕ್ಷಣ ಇಲಾಖೆಯು ನೀಡುತ್ತಿರುವುದರಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಈ ಯೋಜನೆಯನ್ನು ಕೈಬಿಡಲು ಪರಿಶೀಲಿಸುತ್ತಿದೆ.

1652 (2026) ಶ್ರೀ.ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಸವಣೂರ ಪುರಸಭೆ, ಶಿಗ್ಗಾಂವ ಬಂಕಾಪುರ ಪಟ್ಟಣ ಪಂಚಾಯತಿಗಳಿಗೆ ಒಳಚರಂಡಿ ಯೋಜನೆ, ರಸ್ತೆ ಡಾಂಬರೀಕರಣ, ಗಟಾರ ನಿರ್ಮಾಣ, ಕುಡಿಯುವ ನೀರಿನ ತೊಂದರೆಗಳಿರುವುದರಿಂದ ಊರಿನ ಸಮಸ್ತ ನಾಗರೀಕರಿಗೆ ಬಹಳಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ಈ ಎಲ್ಲಾ ಯೋಜನೆಗಳಿಗೆ ಅನುದಾನ ಬಿಡುಗಡೆಗೊಳಿಸುವ ಬಗ್ಗೆ ಸರ್ಕಾರ ಚಿಂತನೆ ಮಾಡಿದೆಯೇ?

3. ಹಾಗಿದ್ದಲ್ಲಿ, ಆದಷ್ಟು ತೀವ್ರಗತಿಯಲ್ಲಿ ಅನುದಾನ ಬಿಡುಗಡೆ ಮಾಡುವುದೆ?

4. ಸವಣೂರು–ಶಿಗ್ಗಾಂವ–ಬಂಕಾಪುರ ಊರುಗಳಲ್ಲಿ ಸಿಬ್ಬಂದಿ ವರ್ಗಕ್ಕೆ ವಸತಿ ಗೃಹಗಳು (ಕ್ವಾಟ್ರಸ್) ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

5. ಬಂದಿದ್ದಲ್ಲಿ, ಸರ್ಕಾರವು ಎಷ್ಟು ಕಾಲಾವಕಾಶದಲ್ಲಿ ವಸತಿ ಗೃಹಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುತ್ತದೆ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು):

1. ಬಂದಿದೆ.

2. ಯೋಜನೆ ತಯಾರಿಸಿರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

3. ಸರ್ಕಾರದ ಪರಿಶೀಲನೆಯಲ್ಲಿದೆ.

4. ಅನ್ವಯಿಸುವುದಿಲ್ಲ.

5. ಅನ್ವಯಿಸುವುದಿಲ್ಲ.

1653 (2027) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಶಿಗ್ಗಾಂವ–ಸವಣೂರ–ತಡಸ–ಬಂಕಾಪುರ ಆರಕ್ಷಕ ಠಾಣೆಗಳಲ್ಲಿ ಸಿಬ್ಬಂದಿಗಳ ಕೊರತೆ ಹಾಗೂ ಆರಕ್ಷಕರಿಗೆ ವಸತಿ ಗೃಹಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಬಂದಿದ್ದಲ್ಲಿ, ಇವುಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಇ. ಸವಣೂರು ಕೃಷಿ ಮಾರುಕಟ್ಟೆ ಆವರಣದಲ್ಲಿ ಕಟ್ಟಡ ಇದ್ದು, ಅಲ್ಲಿ ಹೆಚ್ಚುವರಿ ಆರಕ್ಷಕ (Out Post)ಠಾಣೆ ಪ್ರಾರಂಭಿಸುವ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ?

ಈ. ಹಾಗಿದ್ದಲ್ಲಿ ಇದರ ಬಗ್ಗೆ ತೀವ್ರಗತಿಯಲ್ಲಿ ಎಷ್ಟು ಕಾಲಾವಕಾಶದಲ್ಲಿ ಕ್ರಮ ಕೈಗೊಳ್ಳಲಾಗುವುದು?

ಉ. ಬಂಕಾಪುರದಲ್ಲಿ ಆರಕ್ಷಕ ಠಾಣೆಯ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ. ಬಂದಿದ್ದಲ್ಲಿ, ಎಷ್ಟು ಕಾಲಾವಕಾಶದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ?